**ಓ.ಎಸ್. ನಂಃ 140/2020**

**ಪಿ.ಡಬ್ಲ್ಯೂಃ 1**

**ದಿನಾಂಕ 12.08.2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ವಾದಿಯ ಪರ: ಶ್ರೀ ಬಿ.ಕೆ.ಪಿ ವಕೀಲರಿಂದಃ**

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ರೂಪದಲ್ಲಿ ಸಲ್ಲಿಸುತ್ತಿದ್ದು ಅದನ್ನು ನನ್ನ ಮಾಹಿತಿ ಮೇರೆಗೆ ನನ್ನ ವಕೀಲರು ತಯಾರಿಸಿರುತ್ತಾರೆ. ಅದರಲ್ಲಿ ಬರೆದಿರುವ ಸಂಗತಿಗಳು ನಿಜ ಇರುತ್ತವೆ ಮತ್ತು ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

ಪಟ್ಟಾ ಪುಸ್ತಕವನ್ನು ನಿಪಿ.1 ಎಂದು, ಪಹಣಿಗಳನ್ನು ನಿಪಿ.2 ರಿಂದ 6 ಎಂದು, ವರ್ಗಾವಣೆ ಆದೇಶಗಳನ್ನು ನಿಪಿ.7 ಮತ್ತು 8 ಎಂದು, ತೆರಿಗೆ ಪಾವತಿ ರಸೀದಿಗಳನ್ನು ನಿಪಿ.9 ಮತ್ತು 10 ಎಂದು, ದಿಃ 21.06.2019 ರಂದು ಉಪ ತಹಸೀಲ್ದಾರವರು ನೀಡಿದ ಹಿಂಬರಹವನ್ನು ನಿಪಿ.11 ಎಂದು, ನಕಾಶೆಯ ದೃಡಿಕೃತ ನಕಲನ್ನು ನಿಪಿ.12 ಎಂದು, ಪೋಲಿಸರು ನೀಡಿದ ಸ್ವೀಕೃತಿ ಮತ್ತು ಹಿಂಬರಹವನ್ನು ನಿಪಿ.13 ಮತ್ತು 14 ಎಂದು ಗುರುತಿಸಲಾಯಿತು.

**ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು**
**ಕೆ.ಆರ್.ನಗರ**